* * *

'ಹೆಹೆಹೆಹೆ... ಚೆನ್... ನ್ನಾಗಿದೀರ?'ಎನ್ನುತ್ತಾ ಜಬ್ಬರನನ್ನು ಸ್ವಾಗತಿಸಿದ ಕ್ಯಾಶಿಯರ್ ಜಾಗದಲ್ಲಿ ಕುಳಿತ ಉಮೇಶಿ. 'ಕ್ಯಾ ಭಾಯೀ ಉಮೇಶೀ, ಸಬ್ ಖೈರ‍್ರತ್?' ಎನ್ನುತ್ತಾ ಜಬ್ಬರ್ ಅವನ ಮುಗುಳ್ನಗೆ ಚೆಲ್ಲಿರುವ ಢಾಬಾದೊಳಕ್ಕೆ ದಾಖಲಾದ. ಅವನ ಹಿಂದೆಯೇ ಒಂದಷ್ಟು ಪ್ರಯಾಣಿಕರು ಆಕಳಿಕೆಯ ಸಮೇತ ನಡೆದು ಬಂದರು. ಬಸ್ಸು ಎಲ್ಲಿ ತಮ್ಮನ್ನು ಬಿಟ್ಟು ಹೋಗುತ್ತದೋ ಎಂಬ ಭಯವಿದ್ದ ಕೆಲವರು ಜಬ್ಬರನ ಚಲನವಲನವನ್ನೇ ಗಮನಿಸುತ್ತಾ ಅವನ ಪಕ್ಕದ ಟೇಬಲ್ ಗಳಲ್ಲೇ ಕುಳಿತರು. ವಲಸೆ ಬದುಕು ಸೃಷ್ಟಿಸುವ ಇಂಥಾ ನಡು ರಾತ್ರಿಯ ಆತಂಕವನ್ನು ಪ್ರತಿದಿನವೂ ನೋಡುತ್ತಾ ಬಂದಿರುವ ಜಬ್ಬರ್, 'ಆರಾಮ್ಸೇ ಖಾವ್. ಯಾರನ್ನೂ ಬಿಟ್ಟು ಹೋಗಲ್ಲ' ಎಂದು ದೊಡ್ಡ ದನಿಯಲ್ಲಿ ಅಭಯ ನೀಡಿ ಉಮೇಶಿ ಕುಳಿತಿದ್ದ ಕ್ಯಾಶ್ ಕೌಂಟರಿನತ್ತ ನಡೆದು ಹೋದ. ದೆವ್ವಗಳು ಭೋಜನ ಮಾಡುವ ಈ ಹೊತ್ತಿನಲ್ಲಿ ಪ್ರಯಾಣಿಕರನ್ನೆಲ್ಲ ಕಾಫಿಗೆಂದು ಎಳಿಸಿಕೊಂಡು ಬಂದರೂ ಸಹಾ, ಡ್ರೈವರನಿಗೆ ನಿದ್ರೆ ಬರಬಾರದು ಎನ್ನುವುದೇ ಈ ಚಹಾ ವಿರಾಮದ ಮುಖ್ಯ ಉದ್ದೇಶ ಎಂಬುದು ಉಮೇಶಿಯ ಅಂಬೋಣ. ಅದು ಒಂದು ಹಂತಕ್ಕೆ ನಿಜವೇ ಎಂದು ಜಬ್ಬರನೂ ನಂಬುತ್ತಾನೆ. ಡ್ರೈವಿಂಗ್ ಎನ್ನುವುದೇ ಒಂದು ರೀತಿ ಸಾವಿನ ಬಾಗಿಲಿನಲ್ಲಿ ಮಾಡುವ ಸರ್ಕಸ್ ಇದ್ದ ಹಾಗೆ. ಸ್ಟೇರಿಂಗ್ ಎನ್ನುವ ಹತ್ತಾರು ಜೀವಗಳ ಪ್ರಾಣವನ್ನು ಎಡಕ್ಕೂ, ಬಲಕ್ಕೂ ತಿರುಗಿಸುವ ಚಕ್ರವನ್ನು ಒಂದೇ ಒಂದು ಸುತ್ತು ಹೆಚ್ಚು ತಿರುಗಿಸಿದರೂ ಮುಗಿಯಿತು, ಟೀ ಶರ್ಟು, ಥ್ರೀ ಫೋರ್ತ್ ಚಡ್ಡಿ ತೊಟ್ಟು ಮಲಗಿರುವ ಮಂದಿಯೆಲ್ಲ ನೇರ ಅಲ್ಲಾಹನ ಲೋಕದಲ್ಲೇ ಎಚ್ಚರಾಗುತ್ತಾರೆ. ಜಬ್ಬರ್ ಗೆ ಹಾಗಂತ ಹೇಳಿದ್ದವರು ಸಾಕ್ಷಾತ್ ಅಬ್ಬು. ನೊಣಬೂರು ಉಡುಪರ ಸ್ಕೂಲು ಬಸ್ಸಿಗೆ ಡ್ರೈವರ್ ಆಗಿ ಸೇರಿಕೊಳ್ಳುತ್ತೇನೆಂದವನಿಗೆ ಆ ಕಿವಿಮಾತನ್ನು ಹೇಳಿಯೇ ಅವರು ಡ್ರೈವರ್ ಶಶಿಯ ಬಳಿಗೆ ಕಳಿಸಿದ್ದರು. ಅಬ್ಬೂವಿನ ಅಂಗಡಿಯಲ್ಲಿ ಕುಳಿತು ಚಾ ಕುಡಿಯುತ್ತಾ 'ಏನ್ ಬೇಟೇ, ಚಡ್ಡೀ ಕೇ ಅಂದರ್ ಸಬ್ಕುಚ್ ಠೀಕ್ ಠಾಕ್?' ಎಂದು, ಒಂದು ಕಾಲಕ್ಕೆ ಎಲ್ಲರೆದುರು ಮರ್ಯಾದೆ ತೆಗೆಯುತ್ತಿದ್ದವನು ಶಶಿ. ಆದರೆ ಈಗ ಬಸ್ಸಿನ ಸ್ಟೇರಿಂಗ್ ಕೈಗೆ ಕೊಟ್ಟು ಗುರುವಾಗಿ ಪಕ್ಕ ಕುಳಿತಾಗ ಮಾತ್ರ ಅವನು ಪಕ್ಕಾ ಮುಂಬೈ ಗೂಡ್ಸು ಗಾಡಿಯ ಡ್ರೈವರ್ ಶಶಿ ಮಿಯ್ಯಾ ಆಗಿ ಬದಲಾಗುತ್ತಿದ್ದ. 'ಠೀಕ್ ಸೆ ಹಿಡ್ಕೋ. ಐಸಾ ಹಿಡ್ಕೊಂಡ್ರೆ ನೀನು ಸ್ಟೇರಿಂಗು ತಿರುಗ್ಸೋದಲ್ಲ, ಅದೇ ನಿನ್ನ ತಿರುಗ್ಸತ್ತೆ ಅಷ್ಟೇ. ನಿಧಾನಕ್ಕೆ ಆಕ್ಸಿಲೇಟರ್ ಒತ್ತು. ಬಸ್ ಅಂದ್ರೆ ಬಕ್ರೀ ಇದ್ದಂಗೆ. ಪ್ಯಾರ್ ಸೆ ಕರೆದ್ರೆ ಮಾತ್ರ ಬರತ್ತೆ' ಎಂದೆಲ್ಲ ತಿದ್ದುತ್ತಿದ್ದ. ಇನ್ನೂ ಮುಂದೆ ಹೋಗಿ ಅವನು ಪಾಠದ ಕಠಿಣ ಅಧ್ಯಾಯವಾಗಿ ಸುಡುವ ಊದುಬತ್ತಿಗಳನ್ನು ಸ್ಟೇರಿಂಗಿಗೆ ಸಿಕ್ಕಿಸಿಬಿಡುತ್ತಿದ್ದ. ಒಂದೇ ರೀತಿಯ, ಏರಿಳಿತಗಳಿಲ್ಲದ ರಸ್ತೆಯಲ್ಲಿ ಒಂದೇ ಲಯದಲ್ಲಿ ಸಾಗುವಾಗ ಜೊಂಪು ಹತ್ತಿ ಮುಖ ಧಡ್ಡನೆ ವಾಲಿದಾಗ ಆ ಊದುಬತ್ತಿ ಚೊಯ್ಯೆಂದು ಹಣೆಗೆ ಚುಚ್ಚಿಬಿಡುತ್ತಿತ್ತು. ಮೊದಲ ತಿಂಗಳಲ್ಲಂತೂ ಜಬ್ಬಾರನ ಇಡೀ ಹಣೆ ಸುಡುವ ಊದು ಬತ್ತಿ ಕೊಟ್ಟ ಮುತ್ತುಗಳಿಂದ ತುಂಬಿ ಹೋಗಿತ್ತು. ಆದರೆ ಶಶಿಯ ಪಾಠ ಹುಸಿ ಹೋಗಲಿಲ್ಲ. ಸುಟ್ಟ ಗಾಯಗಳು ಮಾಯುವ ಮುನ್ನ ಎಂದೂ ಮರೆಯದ ಎಚ್ಚರಿಕೆಯೊಂದನ್ನು ಎದೆಯೊಳಗೆ ಬಿತ್ತಿ ಹೋಗಿದ್ದವು. ಮುಂದೆ ಡ್ರೈವಿಂಗ್ ಮಾಡುವಾಗ ಯಾವಾಗ ಸಣ್ಣ ತೂಕಡಿಕೆ ಬಂದರೂ ಅಗೋಚರ ಊದುಬತ್ತಿಯೊಂದು ಹಣೆಯನ್ನು ಇರಿದಂತಾಗಿ ಜಬ್ಬರ ಬೆಚ್ಚಿ ಎಚ್ಚರಾಗುತ್ತಿದ್ದ.

ಹೀಗೆ ಉರಿಯುವ ಅಗೋಚರ ಊದುಬತ್ತಿಗಳು ಹಾಗೂ ಘಮಘಮಿಸುವ ಭರಪೂರ ಚಹಾಗಳ ಸಹಯೋಗದಲ್ಲಿ ತೂಕಡಿಕೆಯ ರಾತ್ರಿಗಳನ್ನು ಎದುರಿಸುತ್ತಾ ಬೆಂಗಳೂರು ಹಾಗೂ ಹೊಸನಗರಗಳ ನಡುವಿನ ನಿಶ್ಚಿತ ಪಥದಲ್ಲಿ ಉಪಗ್ರಹದಂತೆ ಸುತ್ತುತ್ತಿದ್ದ ಜಬ್ಬರ್ ನ ದಿನಚರಿಯಲ್ಲಿ ಉಮೇಶಿಯ ಢಾಬಾ ಸಹಾ ಒಂದು ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದ್ದು ಎರಡು ವರ್ಷಗಳ ಕೆಳಗೆ. ಇನ್ನು, ಉಮೇಶಿಯೆಂಬ ಪ್ಯಾದೆ ದೋಸ್ತನೊಬ್ಬ ಅವನ ಬದುಕಿನೊಳಕ್ಕೆ ಮೊದಲ ಬಾರಿಗೆ ಓಡುತ್ತಾ ಬಂದಿದ್ದು ಯಾರೋ ಕಳ್ಳನೊಬ್ಬನನ್ನು ಬೆನ್ನಟ್ಟಿಕೊಂಡು. ಆ ದಿನ ಮೆಜೆಸ್ಟಿಕ್ಕಿನ ಕಿಕ್ಕಿರಿದ ಬಸ್ ನಿಲ್ದಾಣದಲ್ಲಿ, ಬೇರೆ ಬೇರೆ ದಿಕ್ಕಿಗೆ ಚಲಿಸುವ, ಒಂದೇ ಯಂತ್ರದ ಬಿಡಿ ಭಾಗಗಳಂತೆ ಓಡಾಡಿಕೊಂಡಿದ್ದ ಜನರ ನಡುವೆ ಜಬ್ಬರ್ ತಲೆ ಕೆರೆಯುತ್ತಾ ಕುಳಿತಿದ್ದಾಗಲೇ 'ಹಿಡೀರಿ ಹಿಡೀರಿ... ಕಳ್ಳ ಕಳ್ಳ... ನನ್ ಪರ್ಸೂ... ಹಿಡೀರೀ...' ಎಂಬ ಅಶರೀರವಾಣಿಯೊಂದು